ಮಾಡಿದವರಿಗೆ ಶಿಕ್ಷೆ ಕೊಡಿಸುತ್ತದೆ, ಕೊಲ್ಲುತ್ತದೆ. ಅದರಾಚೆಗೆ ಈ ಜನ ಇದ್ದಾರೆ ಅನ್ನುವುದು ಸರ್ಕಾರಕ್ಕೆ ಗೊತ್ತುಕೂಡ ಇಲ್ಲ.

'ನಾವು ಲುವೀನಿಯಾ ಬಿಡಬೇಕು ಅನ್ನುತ್ತೀರ ಮೇಷ್ಟರೇ. ನಿಮ್ಮ ಪ್ರಕಾರ ನಾವು ಹಸಿದುಕೊಂಡು ಬದುಕಿದ್ದು, ಹಸಿದಿರುವ ಅಗತ್ಯವಿಲ್ಲದೆ ಇದ್ದರೂ ಹಸಿದುಕೊಂಡಿರುವುದು ಸಾಕು ಅನ್ನುತ್ತೀರಿ. ನಾವು ಊರು ಬಿಟ್ಟು ಹೋದರೆ ಇಲ್ಲಿ ಬದುಕಿದ್ದ ನಮ್ಮ ಹಿರೀಕರನ್ನ ನೋಡುವವರು ಯಾರು? ಎಷ್ಟೋ ತಲೆಮಾರಿನ ನಮ್ಮ ಹಿರಿಯರೆಲ್ಲ ಇಲ್ಲೇ ಇದಾರೆ. ನಾವು ಅವರನ್ನ ಬಿಟ್ಟು ಬರಲಾರೆವು ಅಂದರು.

'ಅವರೆಲ್ಲ ಇನ್ನೂ ಅಲ್ಲೇ ಇದಾರೆ. ಅಲ್ಲಿಗೆ ಹೋದಾಗ ನೀನೇ ನೋಡತೀಯ. ಮೆಸ್ಕ್ವೀಟ್ ಹೆಂಡದ ಸೊಪ್ಪು ಜಗಿದು ರಸ ನುಂಗಿ ಹಸಿವು ಕಳೆಯುತ್ತಾ, ಗೋಡೆಗೆ ಒತ್ತಿಕೊಂಡು ನೆರಳಿನ ಹಾಗೆ ಜರುಗುತ್ತಾ, ಗಾಳಿ ಅವರನ್ನ ಎಳೆದುಕೊಂಡು ಹೋಗುತ್ತಿದೆ ಅನ್ನುವ ಹಾಗಿರುವ ಜನರನ್ನ ನೋಡತೀಯ.'

'ಗಾಳಿಯ ಶಬ್ದ ಕೇಳುವುದಿಲ್ಲವೇ? ಸತ್ತು ಹೋಗುತ್ತೀರ, ಅಂದೆ.

'ಏನು ಸಹಿಸಬೇಕೋ ಅದನ್ನ ಸಹಿಸಲೇಬೇಕು. ದೇವರ ಇಚ್ಛೆ ಅದು. ಗಾಳಿ ಬೀಸುವುದು ನಿಂತರೆ ಲುವೀನಾದಲ್ಲಿ ಬಿಸಿಲು ಜೋರಾಗಿ ನಮ್ಮ ಮೈಯಲ್ಲಿರುವ ನೀರಿನ ಪಸೆ ಒಣಗಿ ಸತ್ತು ಹೋಗತೇವೆ. ಹೀಗೆ ಬೀಸುವ ಗಾಳಿಯಿಂದಲೇ ಬಿಸಿಲ ಶಾಖ ನಮಗೆ ತಗಲುವುದಿಲ್ಲ, ಹೀಗಿರುವುದೇ ಸರಿ ಅಂದರು.

'ನಾನು ಏನೂ ಅನ್ನಲಿಲ್ಲ. ಲುವೀನಿಯಾ ಬಿಟ್ಟೆ. ಮತ್ತೆ ಹೋಗಲಿಲ್ಲ, ಹೋಗುವುದೂ ಇಲ್ಲ.

'...ಈ ಲೋಕ ಹೇಗೆ ಲಾಗ ಹಾಕತದೆ ನೋಡು. ಇನ್ನು ಸ್ವಲ್ಪ ಹೊತ್ತಿನಲ್ಲಿ ನೀನು ಅಲ್ಲಿಗೆ ಹೋಗತೀಯ. ಹದಿನೈದು ವರ್ಷದ ಹಿಂದೆ ನನಗೂ ಕೂಡ 'ನೀನು ಸಾನ್ ಹ್ವಾನ್ ಲುವೀನಾಗೆ ಹೋಗತೀಯ' ಅಂದಿದ್ದರು.

'ಆ ಕಾಲದಲ್ಲಿ ನಾನು ಒಳ್ಳೆ ಶಕ್ತಿಯಾಗಿದ್ದೆ. ತಲೆಯ ತುಂಬ ಐಡಿಯಾಗಳಿದ್ದವು. ಮೇಷ್ಟರ ತಲೆಗಳಿಗೆ ಎಂತೆಂಥ ಐಡಿಯಾ ತುಂಬುತಾರೆ ನಿನಗೂ ಗೊತ್ತಲ್ಲ. ಆ ಐಡಿಯಾಗಳ ಹೊರೆ ಹೊತ್ತುಕೊಂಡು, ಏನಾದರೂ ಸಾಧಿಸಬೇಕು, ಮಾಡಬೇಕು ಅಂದುಕೊಂಡು ಹೋಗತೇವೆ. ಲುವೀನಾದಲ್ಲಿ ಇದೇನೂ ನಡೆಯಲಿಲ್ಲ. ಪ್ರಯೋಗ ಮಾಡಿದೆ, ಫಲವಿಲ್ಲ.

'ಸಾನ್ ಹ್ವಾನ್ ಲುವೀನಾ. ದೇವಲೋಕದ ಹೆಸರಿನ ಹಾಗೆ ಕೇಳಿಸಿತ್ತು. ಆದರೆ, ಅದು ನರಕ. ಇಡೀ ಊರು ಸಾವಿನ ಹಾಸಿಗೆಯ ಮೇಲೆ ಬಿದ್ದುಕೊಂಡಿದೆ. ಅಲ್ಲಿ ನಾಯಿಗಳೂ ಸತ್ತು ಹೋಗಿವೆ. ಅಲ್ಲಿನ ನಿಶ್ಶಬ್ದದಲ್ಲಿ ಯಾರನ್ನಾದರೂ ನೋಡಿ ಬೊಗಳುವುದಕ್ಕೆ ಅಲ್ಲಿ ಯಾರೂ ಇಲ್ಲ. ಅಲ್ಲಿನ ಗಾಳಿಗೆ ಹೊಂದಿಕೊಂಡ ತಕ್ಷಣ ಬರಿಯ ಮೌನವಷ್ಟೇ ಕೇಳಿಸುತ್ತದೆ, ಎಲ್ಲ ಏಕಾಂತಗಳಲ್ಲಿ ಇರುವಂಥ ಮೌನ. ಆ ಮೌನ ನಿನ್ನನ್ನ ತೇಯ್ದು ಬಿಡುತ್ತದೆ. ನನ್ನನ್ನ ನೋಡು. ಮೌನ ಹೇಗೆ ನನ್ನ ನವೆದುಬಿಟ್ಟಿದೆ. ನೀನೇ ಹೋಗತಾ ಇದೀಯಲ್ಲ, ಈಗ ನಾನು ಹೇಳತಾ ಇರುವುದೆಲ್ಲ ಇನ್ನೇನು ನಿನಗೇ ಗೊತ್ತಾಗತದೆ...

'ಸ್ವಲ್ಪ ಮೆಸ್ಕಾಲ್ ಹೆಂಡ ತರಿಸಿದರೆ ಹೇಗೆ? ಬಿಯರ್ ಕುಡಿದರೆ ಮತ್ತೆ ಮತ್ತೆ ಏಳಬೇಕಾಗತದೆ. ಮಾತಿಗೆ ಅಡ್ಡಿ. ಹೇಯ್, ಕ್ಯಾಮಿಲೋ, ನಮಗೆ ಮೆಸ್ಕಾಲ್ ತಂದುಕೊಡು...

'ಅದೇ, ನಿನಗೆ ಹೇಳತಾ ಇದ್ದೆನಲ್ಲ...'

★★★